ಸಭೆಯು ಮತ್ತೆ 3–25 ನಿಮಿಷಕ್ಕೆ ಸಮಾವೇಶಗೊಂಡಿತು

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸದನವನ್ನು ಇವತ್ತೇ ಮುಗಿಸುತ್ತೀರೋ ಅಥವಾ ಹೇಗೆ ಎಂಬುದನ್ನು ತಿಳಿಸಲಿಲ್ಲ.

ಅಧ್ಯಕ್ಷರು: ಮುಖ್ಯಮಂತ್ರಿಯವರು ಬಂದಿಲ್ಲ. ಅವರು ಬಂದ ಮೇಲೆ ಮಾತನಾಡುತ್ತೇನೆ.

8. ಸಂದೇಶ

2007ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಯಾವುದೇ ತಿದ್ದುಪಡಿ ಇಲ್ಲದೇ ಕರ್ನಾಟಕ ವಿಧಾನಪರಿಷತ್ತು ಅಂಗೀಕರಿಸಿರುವ ಬಗ್ಗೆ.

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಿಯಮ 118ರ ಮೇರೆಗೆ ವಿಧಾನ ಪರಿಷತ್ತು "2007ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ದಿನಾಂಕ 2ನೇ ಆಗಸ್ಟ್ ರಂದು ಯಾವುದೇ ತಿದ್ದುಪಡಿಗಳು ಇಲ್ಲದೆಯೇ ಅಂಗೀಕರಿಸಲಾಗಿದೆ." ಎಂದು ತಿಳಿಸುತ್ತಾರೆ.

9. ವರದಿಯನ್ನೊಪ್ಪಿಸುವುದು

ಅಧೀನ ಶಾಸನ ಸಮಿತಿಯ 36ನೇ ವರದಿ.

ಅಧ್ಯಕ್ಷರು: ಎನ್. ಯೋಗೀಶ್ ಭಟ್, ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ ಇವರ ಹೆಸರಿನಲ್ಲಿರತಕ್ಕ "2006–07ನೇ ಸಾಲಿನ ಅಧೀನ ರಚನಾ ಸಮಿತಿಯು 36ನೇ ವರದಿ" ಯನ್ನು ಒಪ್ಪಿಸುತ್ತೇನೆ..

10. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು : ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು